ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಗುಲಬರ್ಗಾ

ಸಂಖ್ಯೆ:ಸಿ4(1)/ಪ್ರೌಶಾಶಿ/ಜೇ.ಪ/07/2009–10 ದಿನಾಂಕ: 19–02–2011

ಮಾನ್ಯ ಜಿಲ್ಲಾ ಮಾಹಿತಿ ಅಧಿಕಾರಿಗಳು
ಹಾಗೂ ತಾಂತ್ರಿಕ ನಿರ್ದೇಶಕರು
ಎನ್.ಐ.ಸಿ ಗುಲಬರ್ಗಾ

ಮಾನ್ಯರೆ ,

ವಿಷಯ:– ವಿಭಾಗದಲ್ಲಿರುವ ಸರ್ಕಾರಿ ಪ್ರೌಢ ಶಾಲಾ ಕರ್ತವ್ಯನಿರತ ಸಹ ಶಿಕ್ಷಕರ ತಾತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಅದನ್ನು ವೆಬ್‌ಸೈಟ್‌ದಲ್ಲಿ ಪ್ರಕಟಿಸುವ ಕುರಿತು.

–0–

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಗುಲಬರ್ಗಾ ವಿಭಾಗದಲ್ಲಿರುವ ಸರ್ಕಾರಿ ಪ್ರೌಢ ಶಾಲಾ ಕರ್ತವ್ಯನಿರತ ಸಹ ಶಿಕ್ಷಕರ ಪರಿಷ್ಕೃತ ತಾತಾತ್ಕಾಲಿ ಪಟ್ಟಿಯನ್ನು ದಿನಾಂಕ:19–02–2011 ರಂದು ಪ್ರಕಟಿಸಲಾಗಿದೆ. ಪ್ರಯುಕ್ತ ಶಿಕ್ಷಕರ ಅನುಕೂಲಕ್ಕಾಗಿ ಈ ಪರಿಷ್ಕೃತ ತಾತಾತ್ಕಾಲಿಕ ಪಟ್ಟಿಯನ್ನು ಗುಲಬರ್ಗಾ ವೆಬ್‌ಸೈಟ್‌ದಲ್ಲಿ ಪ್ರಕಟಿಸಬೇಕಾಗಿ ಕೋರಲಾಗಿದೆ.

ತಮ್ಮ ವಿಶ್ವಾಸಿ

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಗುಲಬರ್ಗಾ

ಸಂಖ್ಯೆ:ಸಿ4(1)/ಪ್ರೌಶಾಶಿ/ಜೇ.ಪ/07/2009-10 ದಿನಾಂಕ: 19-02-2011

ಜ್ಞಾಪನಾ

ವಿಷಯ :-ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ, ಗುಲಬರ್ಗಾ ವಿಭಾಗ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ :-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿ.ಪಿ.ಎ.ಆರ್.-12/ಎಸ್.ಡಿ.ಇ./2007 ದಿನಾಂಕ: 29-01-2008

2) ಸರ್ಕಾರದ ಪತ್ರ ಸಂಖ್ಯೆ: ಇಡಿ-250/ಡಿ.ಪಿ.ಐ-2006, ದಿನಾಂಕ: 22-02-2008.

3) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅರೇ ಸರ್ಕಾರಿ ಪತ್ರ ಸಂಖ್ಯೆ: ಸಿ5(1)/ನೇಮಕಾತಿ ಪ್ರಾಧಿಕಾರ/63/2007-08 ದಿನಾಂಕ: 31-03-2008

4) ಈ ಕಾರ್ಯಾಲಯದ ಪತ್ರ ಸಂಖ್ಯೆ: ಸಿ4(1)ಪ್ರೌಶಾಶಿ/ಕೆ.ಎ.ಟಿ/66/2009-10 ದಿನಾಂಕ:31-08-2010

5) ಸರ್ಕಾರದ ಪತ್ರ ಸಂಖ್ಯೆ:ಇಡಿ.118/ಎಸ್.ಇ.ಡಬ್ಲ್ಯೂ.2010 ದಿನಾಂಕ:24-01-2011

-0-

**ಪೀಠಿಕೆ**

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01)ರ ಸರ್ಕಾರಿ ಅಧಿಸೂಚನೆ ಹಾಗೂ ಉಲ್ಲೇಖ (02)ರ ಸರ್ಕಾರಿ ಸುತ್ತೋಲೆಯಂತೆ ಗುಲಬರ್ಗಾ ವಿಭಾಗದ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಗ್ರೂಪ-ಬಿ ವೃಂದದ ಹಾಗೂ ತತ್ಸಮಾನ ವೃಂದದ ಹುದ್ದೆಗಳಿಗೆ ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರಿಗೆ ನೇಮಕಾತಿ ಪ್ರಾಧಿಕಾರವೆಂದು ನಿಗದಿಪಡಿಸಿ, ಆದೇಶಿಸಲಾಗಿತ್ತು . ಅದರಂತೆ 2008 ರಲ್ಲಿ ಜೇಷ್ಠತಾ ಪಟ್ಟಿ ಪ್ರಕರಟಿಸಲಾಗಿತ್ತು.

ಉಲ್ಲೇಖ-4 ರ ಪತ್ರದ ಮೂಲಕ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲು ಮಾರ್ಗದರ್ಶನ ಕೋರಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ:ಇಡಿ.118/ಎಸ್.ಇ.ಡಬ್ಲ್ಯೂ.2010 ದಿನಾಂಕ:24-01-2011 ರ ಪತ್ರದ ಪ್ರತಿಯನ್ನು ನೀಡಿರುತ್ತಾರೆ. ಸದರಿ ಪತ್ರದಲ್ಲಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ ) ನಿಯಮಗಳು 1957 ರ ನಿಯಮ 10 ರನ್ವಯ ಎರಡು ಅಥವಾ ಹೆಚ್ಚಿನ ವೃಂದಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ/ನೌಕರರಗಳ ಜೇಷ್ಠತಾ ಪಟ್ಟಿಯನ್ನು ಒಟ್ಟುಗೂಡಿಸಿ ಒಂದು ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಸಂಬಂಧಿಸಿದ ನಿಯಮಗಳಲ್ಲಿ ಅಸ್ಪದವಿದ್ದಲ್ಲಿ ಅಂತಹ ಅಧಿಕಾರಿಗಳ/ನೌಕರರ ಅಂತರ್ ಜೇಷ್ಠತಾ ಪಟ್ಟಿಯನ್ನು ಅವರುಗಳ ಆ ವೃಂದಗಳಲ್ಲಿ ಸಲ್ಲಿಸಿರುವ ನಿರಂತರವಾದ ಸೇವೆಯ ಆಧಾರದ ಮೇಲೆ ನಿರ್ಧರಿಸಿ ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸಬೇಕಾಗುತ್ತದೆ. ಎಂದು ಸ್ಪಷ್ಟೀಕರಿಸಿರುತ್ತಾರೆ. ಸರ್ಕಾರದ ಮಾರ್ಗದರ್ಶನದನ್ವಯ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಬೇಕಾಗಿರುವ ಹಿನ್ನೆಲೆಯಲೆಯಲ್ಲಿ ಈ ಕೆಳಕಂಡಂತೆ ಆದೇಶ.

**ಆದೇಶ:**

ಪೀಠಿಕೆಯಲ್ಲಿ ಪ್ರಸ್ತಾಪಿಸಿದಂತೆ ಗುಲಬರ್ಗಾ ವಿಬಾಗದ 1970 ರಿಂದ 31-12-2009 ರವರೆಗೆ ನೇರ ನೇಮಕಾತಿಯಾದ/ಬಡ್ತಿಯಾದ ಪ್ರೌಢ ಶಾಲಾ ಸಹ ಶಿಕ್ಷಕರ (ಟಿಜಿಟಿ ಶಿಕ್ಷಕರು ಸೇರಿದಂತೆ) ಜೇಷ್ಠತಾ ಪಟ್ಟಿಯನ್ನು , ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಕಟಿಸಲಾಗುತ್ತಿದೆ. ಈ ಪಟ್ಟಿಯನ್ನು ವೆಬ್ ಸೈಟ್ ವಿಳಾಸ www.cpigulbarga.kar.nic.in ದಲ್ಲಿ ಸಹ ಪ್ರಕಟಿಸಲಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು , ವೆಬ್ ಸೈಟ್ ವಿಳಾಸವನ್ನು ಮತ್ತು ಈ ಜ್ಞಾಪನಾ ಪತ್ರವನ್ನು ತಪ್ಪದೇ ಉಪ ನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ತಮ್ಮ ಕಾರ್ಯಾಲಯಗಳ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು. ಈ ಕುರಿತು ಎಲ್ಲಾ ಶಿಕ್ಷಕರ ಗಮನಕ್ಕೆ ತಂದು , ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಕ್ಷೇಪಣೆಗಳನ್ನು ದಿನಾಂಕ: 18-03-2011 ರವರೆಗೆ ಪಡೆದುಕೊಂಡು , ಅವುಗಳನ್ನು ದಿನಾಂಕ:19-03-2011 ರಂದು ತಪ್ಪದೇ ಉಪ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು . ಉಪ ನಿರ್ದೇಶಕರುಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಮಾಹಿತಿಯನ್ವಯ ಜಿಲ್ಲೆಯ ಒಟ್ಟು ಪಟ್ಟಿಯಲ್ಲಿ ಸರಿಪಡಿಸಿ ಮಾಹಿತಿಯನ್ನು ದಿನಾಂಕ:22-03-2011 ರಂದು Excel ದಲ್ಲಿ ಸಿಡಿ ರೂಪದಲ್ಲಿ ಮಾಹಿತಿ ಹಾಗೂ ಮುದ್ರಿತ ಪ್ರತಿಯೊಂದಿಗೆ ತಪ್ಪದೇ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರಿಗೆ ತಪ್ಪದೇ ಸಲ್ಲಿಸತಕ್ಕದ್ದು.

**ಷರತ್ತುಗಳು:-**

1) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ 1970 ರಿಂದ 31-12-2009 ರವರೆಗೆ ನೇಮಕಾತಿ ಆದ /ಬಡ್ತಿ ಹೊಂದಿದ ಶಿಕ್ಷಕರುಗಳ ಸೇವಾ ಆಧಾರದ ಮೇರೆಗೆ ತಯಾರಿಸಲಾಗಿದೆ. ತಮ್ಮ ವಿದ್ಯಾರ್ಹತೆ /ಜನ್ಮದಿನಾಂಕ/ಸೇವೆಗೆ ಸೇರಿದ ದಿನಾಂಕಗಳ ಮತ್ತು ಬೋಧನಾ ವಿಷಯಗಳ ಬಗ್ಗೆ ಪರಿಶೀಲಿಸುವುದು , ಸರಿಯಿರದಿದ್ದಲ್ಲಿ ತಮ್ಮ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಆಕ್ಷೇಪಣೆಯನ್ನು ದಿನಾಂಕ:18-03-2011 ರೊಳಗಾಗಿ ಸಲ್ಲಿಸುವುದು ,

2) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್–2 ಹುದ್ದೆಯ ಮೇಲೆ ಬಡ್ತಿ ಹೊಂದಿದ ಶಿಕ್ಷಕರುಗಳು ತಮ್ಮ ವಿದ್ಯಾರ್ಹತೆ /ಜನ್ಮದಿನಾಂಕ/ಸೇವೆಗೆ ಸೇರಿದ ದಿನಾಂಕ/ಪ್ರೌಢ ಶಾಲೆಗೆ ಬಡ್ತಿ ಹೊಂದಿದ ದಿನಾಂಕ/ಬೋಧನಾ ವಿಷಯಗಳ ಬಗ್ಗೆ ಪರಿಶೀಲಿಸುವುದು , ಸರಿಯಿರದಿದ್ದಲ್ಲಿ ತಮ್ಮ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಆಕ್ಷೇಪಣೆಯನ್ನು ದಿನಾಂಕ:18–03–2011 ರೊಳಗಾಗಿ ಸಲ್ಲಿಸುವುದು ,

3.) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರದಿದ್ದಲ್ಲಿ ಅಂತಹ ಶಿಕ್ಷಕರು ನಿಗದಿತ ನಮೂನೆಯಲ್ಲಿ ಮಾಹಿತಿ ಭರಿಸಿ ತಮ್ಮ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಆಕ್ಷೇಪಣೆಯನ್ನು ದಿನಾಂಕ:18–03–2011 ರೊಳಗಾಗಿ ಸಲ್ಲಿಸುವುದು ,

4) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಅಭ್ಯರ್ಥಿಯ ಹೆಸರಿನ ಮುಂದೆ ಕಾಣಿಸಲಾದ ಜಾತಿ/ಪಂಗಡದ ಬಗ್ಗೆ ಜಾತಿ/ಪಂಗಡದ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವ ಷರತ್ತಿಗೊಳಪಟ್ಟಿರುತ್ತದೆ.

5) ಉಪ ನಿರ್ದೇಶಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಒದಗಿಸಿರುವ ಮಾಹಿತಿಯನ್ನಾಧರಿಸಿ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಗಣಕೀಕರಿಸುವಲ್ಲಿ ಕೆಲ ಅಂಕಣದಲ್ಲಿ ಮಾಹಿತಿಗಳು ತಪ್ಪಾಗಿ ನಮೂದಿತವಾಗಿರುವುದು ಗಮನಕ್ಕೆ ಬಂದಿರುವುದು. ಪ್ರಯುಕ್ತ ಮಾಹಿತಿಯು ನಿಖರವಾಗಿರಬೇಕು. ಪ್ರಯುಕ್ತ ಎಲ್ಲಾ ಶಿಕ್ಷಕರು ತಮ್ಮ ತಮ್ಮ ಸೇವಾ ವಿವರಗಳನ್ನು ತಪ್ಪದೇ ಗಮನಿಸತಕ್ಕದ್ದು

6) ಉಪ ನಿರ್ದೇಶಕರುಗಳು ತಾವು ಒದಗಿಸಿರುವ ತಪ್ಪಾಗಿದೆ ಎಂದು ಈ ಕಾರ್ಯಾಲಯದ ಗಮನಕ್ಕೆ ಬಂದಲ್ಲಿ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಜೇಷ್ಠತೆಯನ್ನು ಸರಿಪಡಿಸುವ ಮತ್ತು ಹೆಸರು ಕೈಬಿಡುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿರುತ್ತದೆ.

7) ಈ ಪಟ್ಟಿಯನ್ನು ವಿಭಾಗದ ಎಲ್ಲಾ ಪ್ರೌಢ ಶಾಲಾ ಮುಖ್ಯಸ್ಥರು/ಸಹ ಶಿಕ್ಷಕರು/ಸಂಯೋಜಕರು ಮತ್ತು ಟಿ.ಜಿ.ಟಿ ಶಿಕ್ಷಕರುಗಳು ತಪ್ಪದೇ ಗಮನಿಸತಕ್ಕದ್ದು. ಒಂದು ವೇಳೆ ಮಾಹಿತಿಗಳು ಸರಿಯಿರುವ ಬಗ್ಗೆ ಖಚಿತಪಡಿಸಿಕೊಳ್ಳುವ ಸಂಬಂಧಪಟ್ಟ ಶಾಲಾ ಮೂಖ್ಯಸ್ಥರ/ಸಹ ಶಿಕ್ಷಕರ ಜವಾಬ್ದಾರಿಯಾಗಿದೆ.

8) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಯಿದ್ದಲ್ಲಿ ಆಕ್ಷೇಪಣೆಯನ್ನು ಆಯಾ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಪೂರಕ ದಾಖಲೆಗಳೊಂದಿಗೆ ದಿನಾಂಕ:18–03–2011 ರೊಳಗಾಗಿ ಸಲ್ಲಿಸುವುದು , ಅವಧಿ ಮುಗಿದ ನಂತರ ಸಲ್ಲಿಸಿದಲ್ಲಿ ಅಥವಾ ಆಕ್ಷೇಪಣೆಯನ್ನು ಸಲ್ಲಿಸದೇ ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಶಾಲಾ ಮುಖ್ಯಸ್ಥರು/ಶಿಕ್ಷಕರೇ ಹೋಣೆಗಾರರಾಗಿರುತ್ತಾರೆ.

## (ಮಾನ್ಯ ಆಯುಕ್ತರವರ ಆದೇಶದ ಮೇರೆಗೆ)

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ

ವಿಭಾಗದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ .

ಪ್ರತಿಯನ್ನು:–

1) ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ವಿಭಾಗದ ಎಲ್ಲಾ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜ್ಞಾಪನಾ ಪತ್ರದ ಪ್ರತಿಯನ್ನು ಕಳುಹಿಸುತ್ತಾ ತಿಳಿಸುವುದೇನೆಂದರೆ ಇಂಟರ್‌ನೆಟ್‌ದಲ್ಲಿ ಪ್ರಕಟಿಸಲಾದ ಪಟ್ಟಿಯನ್ನು ಮುದ್ರಿತ ಪ್ರತಿಯನ್ನು ಪಡೆದು ಸೂಚನಾ ಫಲಕದ ಮೇಲೆ ಪ್ರಕಟಿಸಲು ಸೂಚಿಸಿದೆ. . ಹಾಗೂ ಶಿಕ್ಷಕರ ಗಮನಕ್ಕೆ ತರಲು ಅಗತ್ಯ ವ್ಯಾಪಕ ಪ್ರಚಾರಪಡಿಸಲು ಸೂಚಿಸಿದೆ.
4) ಅಧ್ಯಕ್ಷರು ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ(ರಿ) ಗುಲಬಗಾ ಗುಲಬರ್ಗಾ ವಿಭಾಗ ಗುಲಬರ್ಗಾ ಇವರಿಗೆ ಮಾಹಿತಿಗಾಗಿ ಕೊಡಲಾಗಿದೆ.

# ಆಕ್ಷೇಪಣೆ

**(ಪ್ರೌಢ ಶಾಲಾ ಸಹ ಶಿಕ್ಷಕರ 1970–31–12–2009 ರ ತಾತ್ಕಾಲಿಕ  ಜೇಷ್ಠತಾ ಪಟ್ಟಿಗೆ)**

| ಕ್ರಸಂ | ವಿಷಯ | ಸರಿಪಡಿಸಬೇಕಾದ ಮಾಹಿತಿ | ಷರಾ |
|---|---|---|---|
| 1 | ಜೇಷ್ಠತಾ ಸಂಖ್ಯೆ: | | |
| 2 | ಕೆ.ಜಿ.ಐ.ಡಿ. ಸಂಖ್ಯೆ: | | |
| 3 | ರಾಜ್ಯ ಮಟ್ಟದ ಜೇಷ್ಠತಾ ಸಂಖ್ಯೆ: | | |
| 4 | ಹಳೆಯ ರಾಜ್ಯ ಮಟ್ಟದ ಜೇಷ್ಠತಾ ಸಂಖ್ಯೆ: | | |
| 5 | ಹೆಸರು | | |
| 6 | ಶಾಲೆಯ ಕೋಡ್ ಸಂಖ್ಯೆ: | | |
| 7 | ಶಾಲೆಯ ವಿಳಾಸ | | |
| 8 | ಜನ್ಮ ದಿನಾಂಕ | | |
| 9 | ಲಿಂಗ | | |
| 10 | ವಿದ್ಯಾರ್ಹತೆ | | |
| 11 | ನೇಮಕಾತಿ ವಿಧಾನ(ನೇರ/ಬಡ್ತಿ) | | |
| 12 | ಬೋಧನಾ ವಿಷಯ | | |
| 13 | ಸೇವೆಗೆ ಸೇರಿದ ದಿನಾಂಕ | | |
| 14 | ಪ್ರೌಢ ಶಾಲೆಗೆ ಬಂದ ದಿನಾಂಕ | | |
| 15 | ಜಾತಿ | | |
| 16 | ಸ್ನಾತಕೋತರ ಪದವಿ ಪಾಸಾದ ವರ್ಷ | | |
| 17 | ಸ್ನಾತಕೋತರ ಪದವಿ | | |
| 18 | ಷರಾ | | |
| 19 | ಜಿಲ್ಲಾ | | |
| 20 | ತಾಲೂಕ/ವಲಯ | | |

(ವಿ.ಸೂ:– ಪ್ರಸ್ತುತ ಪ್ರಕಟಿಸಿರುವ ಪ್ರೌಢ ಶಾಲಾ ಸಹ ಶಿಕ್ಷಕರ 1970 ರಿಂದ 31–12–2009 ರವರೆಗೆ ಪ್ರಕಟಿಸಲಾದ ತಾತ್ಕಾಲಿಕ  ಜೇಷ್ಠತಾ ಪಟ್ಟಿಯಲ್ಲಿನ ನಮೂದಿತ ಮಾಹಿತಿಯನ್ನು ಆಕ್ಷೇಪಣೆಯಲ್ಲಿನ ಕ್ರಮ ಸಂಖ್ಯೆ: 1 ರಿಂದ 7 ರವರೆಗಿನ ಅಂಕಣದಲ್ಲಿ , ಎಲ್ಲರೂ ತಪ್ಪದೇ ನಮೂದಿಸತಕ್ಕದ್ದು. ಮತ್ತು ಯಾವ ಮಾಹಿತಿ ಸರಿಪಡಿಸಬೇಕಾಗಿದೆಯೋ ಆ ಮಾಹಿತಿಯನ್ನು ಮಾತ್ರ ಸಂಬಂಧಿತ ಅಂಕಣದಲ್ಲಿ ತಪ್ಪದೇ ನಮೂದಿಸತಕ್ಕದ್ದು.)

ದಿನಾಂಕ:                                                                 ಅರ್ಜಿದಾರ ಸಹಿ

ಶಾಲಾ ಮುಖ್ಯಸ್ಥರ ದೃಢೀಕರಣ